Crl Mis– 86/2022

ಆರ್. ಡಬ್ಲೂ – 1

ಸಾಕ್ಷಿಯನ್ನು ದಿಃ 30.06.2026 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ. ಎಂ.ಎಸ್.ಜಿ ವಕೀಲರಿಂದ –**

**1.** ನಾನು ನಡೆಸುತ್ತಿರುವ ಕಂಪ್ಯೂಟರ್ಸ್ ಸೇಲ್ಸ್ ಅಂಡ್ ಸರ್ವೀಸ್ ಸೆಂಟರ್ ಗೆ 5 ಲಕ್ಷ ರೂ. ಬಂಡವಾಳವನ್ನು ಹೂಡಿದ್ದೇನೆ. ಅದನ್ನು ನನ್ನ ತಂದೆ ನನಗೆ ಕೊಟ್ಟಿದ್ದರು. ಸದರಿ ಕಂಪ್ಯೂಟರ್ ಸೆಂಟರಿನಿಂದ ಎಲ್ಲಾ ಖರ್ಚು ಕಡಿತವಾದ ನಂತರ ವರ್ಷಕ್ಕೆ ಸುಮಾರು 1 ಲಕ್ಷ ರೂ. ಉಳಿತಾಯವಾಗುತ್ತದೆ. ನನ್ನ ತಾಯಿ ಸುಳ್ಳು ಹೇಳುವುದಿಲ್ಲ. ಸಾಗರದ ಹಿರಿಯ ವ್ಯವಹಾರ ನ್ಯಾಯಾಧೀಶರ ನ್ಯಾಯಾಲಯದಲ್ಲಿ ನಾನು ವಿಚ್ಛೇದನ ಕೋರಿ ಅರ್ಜಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿ. ನನ್ನ ತಾಯಿ ಪುತ್ತೂರಿನ ಮಹಿಳಾ ಪೋಲಿಸ್ ಠಾಣೆಗೆ ದಿನಾಂಕ 27.12.2021 ರಂದು ಒಂದು ದೂರನ್ನು ನೀಡಿದ್ದಾರೆ ಎಂದರೆ ಸರಿ. ಸದರಿ ದೂರಿನಲ್ಲಿ ಸುಮಾರು 20 ಲಕ್ಷ ರೂ.ಗಳನ್ನು ನನಗೆ ಕೊಟ್ಟಿರುವುದಾಗಿ ಹೇಳಿದ್ದಾರೆ ಎಂದರೆ ಸರಿಯಲ್ಲ. ಸದರಿ ದೂರಿನಲ್ಲಿ ನನ್ನ ತಾಯಿ ಹೇಳಿರುವ ಸಂಗತಿಗಳು ಸುಳ್ಳೇ ಎಂದರೆ ನನಗೆ ಗೊತ್ತಿಲ್ಲ. ಸದರಿ ದೂರಿನ ಸಂಬಂಧ ಪುತ್ತೂರಿನ ಪೋಲಿಸರು ಎನ್ ಸಿ ಆರ್ ದಾಖಲಿಸಿಕೊಂಡಿದ್ದರು ಎಂದರೆ ಸರಿ. ಸದರಿ ದೂರು ನೈಜವಾದುದಲ್ಲ ಎಂದು ಪೋಲಿಸರು ಹಿಂಬರಹ ನೀಡಿದ್ದಾರೆ ಎಂದರೆ ಸರಿ.

**2.** ವಿಚ್ಛೇದನ ಪ್ರಕರಣದಲ್ಲಿ ಸಂಧ್ಯಾ ಅಂದರೆ ನನ್ನ ಹೆಂಡತಿ ಮಾನಸಿಕ ರೋಗಿ ಎಂದು ಬಿಂಬಿಸಲು ದಾಖಲೆಗಳನ್ನು ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ಮುಂದುವರೆದು ನನ್ನ ಬಳಿ ಇದ್ದ ದಾಖಲೆಗಳನ್ನು ಹಾಜರು ಪಡಿಸಿದ್ದೇನೆ ಎಂದು ನುಡಿಯುತ್ತಾರೆ. ಸದರಿ ಪ್ರಕರಣದಲ್ಲಿ ನಾನು ಹಾಜರು ಪಡಿಸಿದ ಮೇಲಿನ ದಾಖಲೆಗಳು ಅರ್ಧ ತಲೆ ನೋವಿಗೆ (ಅರಗನ್ನೆ ಶೂಲೆ) ಸಂಬಂಧಪಟ್ಟ ದಾಖಲೆಗಳು ಎಂದರೆ ಸರಿಯಲ್ಲ. ಆ ದಾಖಲೆಗಳನ್ನು ತೆಗೆದುಕೊಂಡು ಹೋಗಿ ಮಾನಸಿಕ ವೈದ್ಯರನ್ನು ಸಂಪರ್ಕಿಸಿ ಅವರ ಅಭಿಪ್ರಾಯವನ್ನು ನಾನು ಪಡೆದುಕೊಂಡಿಲ್ಲ. 1 ನೇ ಅರ್ಜಿದಾರಳು ಮಾನಸಿಕ ರೋಗಿ ಎನ್ನುವುದು ನನ್ನ ಮತ್ತು ನನ್ನ ತಂದೆ ತಾಯಿಯರ ಅಭಿಪ್ರಾಯ ಎನ್ನುವುದು ಸರಿಯಲ್ಲ. ನಾನು ಹಾಜರು ಪಡಿಸಿದ ಯಾವುದೇ ದಾಖಲೆಗಳಲ್ಲಿ 1 ನೇ ಅರ್ಜಿದಾರಳಿಗೆ schyzophrenia ಎಂಬ ಶಬ್ಧದ ಬಳಕೆ ಮಾಡಿಲ್ಲ ಎಂದರೆ ಸರಿ.

**3.** ನನ್ನ ತಂದೆಗೆ 8 ಜನ ಅಣ್ಣ-ತಮ್ಮಂದಿರು. ನನ್ನ ತಂದೆಗೆ ಪುತ್ತೂರು ತಾಲ್ಲೂಕಿನ ಮುಂಡೂರು ಗ್ರಾಮದಲ್ಲಿ ಜಮೀನು ಇದೆ ಎಂದರೆ ಸರಿ. ಆ ಜಮೀನನ್ನು ನನ್ನ ತಂದೆಯ ಅಣ್ಣ ತಮ್ಮಂದಿರು ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿ. ಜನಾರ್ಧನ್ ಜೋಯಿಸ್ ಬಿನ್ ವೆಂಕಟರಮಣ ಜೋಯಿಸ್ ಎಂದರೆ ನನ್ನ ತಂದೆ. ಯಾವುದಾದರೂ ಸಮಾರಂಭಗಳು ಇದ್ದಾಗ ನನ್ನ ತಂದೆಯ ಸಹೋದರ-ಸಹೋದರಿಯರು ನಮ್ಮ ಮನೆಗೆ ಬರುತ್ತಾರೆ. ಮುಂಡೂರು ಗ್ರಾಮದ ಸರ್ವೇ ನಂಬರ್ 53/6 ರಲ್ಲಿ ನನ್ನ ತಂದೆಗೆ 5 ಗುಂಟೆ ಅಡಿಕೆ ತೋಟ ಇದೆ ಎಂದರೆ, ಸರಿ ಎಂದು ಸಾಕ್ಷಿಯು ಆರ್.ಟಿ.ಸಿಯನ್ನು ನೋಡಿ ಒಪ್ಪಿಕೊಂಡಿದ್ದರಿಂದ, ಸದರಿ ಆರ್.ಟಿ.ಸಿಯನ್ನು ನಿಪಿ-15 ಎಂದು ಗುರುತಿಸಲಾಯಿತು.

**4.** ಮುಂಡೂರು ಗ್ರಾಮದ ಸರ್ವೇ ನಂಬರ್ 53/1 ಎ 1 ಎ ನಲ್ಲಿ ನನ್ನ ತಂದೆಗೆ 1 ಎಕರೆ 04 ಗುಂಟೆ ಜಮೀನು ಇದೆ ಎಂದರೆ, ಸರಿ ಎಂದು ಸಾಕ್ಷಿಯು ಆರ್.ಟಿ.ಸಿಯನ್ನು ನೋಡಿ ಒಪ್ಪಿಕೊಂಡಿದ್ದರಿಂದ, ಸದರಿ ಆರ್.ಟಿ.ಸಿಯನ್ನು ನಿಪಿ-16 ಎಂದು ಗುರುತಿಸಲಾಯಿತು. ಮುಂಡೂರಿನಲ್ಲಿನ 7 ಆಸ್ತಿಗಳನ್ನು ಆಧಾರ ಮಾಡಿ ನನ್ನ ತಂದೆ ಸೊಸೈಟಿಯಿಂದ ಸಾಲ ಪಡೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆಗೆ 7 ಆಸ್ತಿಗಳು ಇವೆ ಎಂದರೆ ಸರಿಯಲ್ಲ.

**5.** ನಮ್ಮ ತಂದೆ ತಾಯಿ ಮನೆಯಲ್ಲಿ ಬಹಳಷ್ಟು ಮಡಿ ಮೈಲಿಗೆ ಆಚರಣೆ ಮಾಡುತ್ತಾರೆ ಎಂದರೆ ಸರಿ. ಮುಂದುವರೆದು ಬಹಳಷ್ಟು ಇಲ್ಲ ಆದರೆ ಆಚರಣೆ ಮಾಡುತ್ತಾರೆ ಎನ್ನುತ್ತಾರೆ. 1 ನೇ ಅರ್ಜಿದಾರಳು ನಮ್ಮ ಮನೆಯಲ್ಲಿದ್ದಾಗ ಮಾಸಿಕ ಮುಟ್ಟಿನ ಸಂದರ್ಭದಲ್ಲಿ ಮೂರು ದಿನಗಳವರೆಗೆ ಮನೆಯ ಹೊರಗೆ ಔಟ್ ಹೌಸ್ ನಲ್ಲಿ ಇರಬೇಕಾಗಿತ್ತು ಎಂದರೆ ಸರಿಯಲ್ಲ. ನನ್ನ ತಕರಾರಿನಲ್ಲಿ 1 ನೇ ಅರ್ಜಿದಾರಳಿಗೆ 2022 ಸೆಪ್ಟೆಂಬರ್ ನವರೆಗೆ ಅವಳ ದಾಖಲೆಗಳು ಸಿಗುವವರೆಗೆ 1 ನೇ ಅರ್ಜಿದಾರಳಿಗೆ ಇರುವ ಮಾನಸಿಕ ರೋಗದ ಕುರಿತು ನನಗೆ ತಿಳಿದಿರಲಿಲ್ಲ ಎಂದು ಬರೆಸಿದ್ದೇನೆ ಎಂದರೆ ಸರಿ. ನನ್ನ ಜನನಾಂಗಕ್ಕೆ ಪುತ್ತೂರಿನ ಸಿಟಿ ಆಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸೆಯಾದಾಗ ನಾನು ಒಳರೋಗಿಯಾಗಿ ದಾಖಲಾಗಿರಲಿಲ್ಲ. ಆ ದಾಖಲೆಗಳು ನನ್ನ ಬಳಿ ಇಲ್ಲ. ಆ ದಾಖಲೆಗಳನ್ನು ತರಲು ನನ್ನಿಂದ ಆಗುವುದಿಲ್ಲ. ಈ ರೀತಿಯ ಸಮಸ್ಯೆ ನನಗೆ ಇದೆ ಎಂದು ವಿವಾಹದ ಪೂರ್ವದಲ್ಲಿ 1 ನೇ ಅರ್ಜಿದಾರಳ ತಂದೆ ತಾಯಿಗೆ ನಾನು ತಿಳಿಸಿರಲಿಲ್ಲ. ಏಕೆಂದರೆ ಅದರ ಬಗ್ಗೆ ನನಗೆ ಗೊತ್ತಿರಲಿಲ್ಲ.

**6.** 2010-12 ನೇ ಸಾಲಿನಲ್ಲಿ 1 ನೇ ಅರ್ಜಿದಾರಳಿಗೆ ಮಾನಸಿಕ ಆರೋಗ್ಯದ ಸಂಬಂಧ ಚಿಕಿತ್ಸೆಯನ್ನು ಕೊಡಿಸಿರುವುದಾಗಿ ದಾಖಲೆಗಳಲ್ಲಿ ಬರೆದಿದೆ. 2013-14 ನೇ ಸಾಲಿನಲ್ಲಿ ಪ್ರಥಮ

ದರ್ಜೆಯಲ್ಲಿ 1 ನೇ ಅರ್ಜಿದಾರಳು ಬಿ.ಕಾಂ ಪದವಿಯನ್ನು ತೇರ್ಗಡೆ ಹೊಂದಿದ್ದಾಳೆ ಎಂದರೆ ನನಗೆ ಗೊತ್ತಿಲ್ಲ. ವಿವಾಹವಾದ ನಂತರ 1 ನೇ ಅರ್ಜಿದಾರಳ ವಿದ್ಯಾಭ್ಯಾಸದ ಬಗ್ಗೆ ವಿಚಾರಣೆ ಮಾಡಿದ್ದೇನೆ. ಮದುವೆಯಾದ ಮಾರನೆ ದಿನವೇ 1 ನೇ ಅರ್ಜಿದಾರಳು ತನ್ನ ಮಾನಸಿಕ ಖಿನ್ನತೆಯನ್ನು ಅಭಿಯುಕ್ತ ಪಡಿಸಿದಳು ಎಂದು ನನ್ನ ತಕರಾರಿನಲ್ಲಿ ಬರೆಸಿದ್ದೇನೆ ಎಂದರೆ ಸರಿ. ತದನಂತರ ಸುಮಾರು 1 ವರ್ಷದ ಬಳಿಕ ನಾನು 1 ನೇ ಅರ್ಜಿದಾರಳನ್ನು ಮನಶಾಂತಿ ಕೌನ್ಸಿಲಿಂಗ್ ಸೆಂಟರ್ ಗೆ ಕರೆದುಕೊಂಡು ಹೋಗಿದ್ದೆ. ಆದರೆ ದಿನಾಂಕ ನನಗೆ ನೆನಪಿಲ್ಲ. ಅಲ್ಲಿ 1 ನೇ ಅರ್ಜಿದಾರಳಿಗೆ ಯಾವುದೇ ಚಿಕಿತ್ಸೆ ನೀಡಿಲಿಲ್ಲ. ಕಾರಣ ಅವಳು ಚಿಕಿತ್ಸೆಗೆ ಮುಂದಿನ ದಿನಾಂಕದಂದು ಬರಲಿಲ್ಲ.

**7.** 2020 ನೇ ಸಾಲಿನಲ್ಲಿ ಪಾಣಜಿಯಲ್ಲಿ 1 ನೇ ಅರ್ಜಿದಾರಳಿಗೆ ಮುಟ್ಟಿನ ಸಮಸ್ಯೆ ಇದ್ದ ಕಾರಣ ನಾಟಿ ವೈದ್ಯರ ಬಳಿ ಚಿಕಿತ್ಸೆಗೆ ಕರೆದುಕೊಂಡು ಹೋಗಿದ್ದೆ. ಅಲ್ಲದೆ ಬೇರೆ ಕಡೆಗೂ ಸಹ ಕರೆದುಕೊಂಡು ಹೋಗಿದ್ದೆ. ಈ ಬಗ್ಗೆ ನನ್ನ ಬಳಿ ದಾಖಲೆಗಳು ಕೆಲವು ಇರಬಹುದು. ಅವುಗಳು ಸಿಕ್ಕರೆ ಹಾಜರು ಪಡಿಸುತ್ತೇನೆ. ನನ್ನ ಜನನಾಂಗದ ಶಸ್ತ್ರ ಚಿಕಿತ್ಸೆ ಆದ ನಂತರ 1 ನೇ ಅರ್ಜಿದಾರಳು ಗರ್ಭಿಣಿಯಾದಳು ಎಂದರೆ ಸರಿ. 2 ನೇ ಅರ್ಜಿದಾರಳಿಗೆ ಈಗ 4–5 ವರ್ಷ ಇರಬಹುದು. 1 ವರ್ಷದ ಹಿಂದೆ ನಾನು 2 ನೇ ಅರ್ಜಿದಾರಳನ್ನು ನೋಡಿದ್ದೇನೆ. ಆಗ ಅವಳ ಆರೋಗ್ಯದ ಸ್ಥಿತಿ ಉತ್ತಮವಾಗಿ ಇದ್ದಂತೆ ಕಾಣಲಿಲ್ಲ. 1 ನೇ ಅರ್ಜಿದಾರಳ ಮಾನಸಿಕ ಆರೋಗ್ಯದ ಸ್ಥಿತಿ ಸರಿ ಇಲ್ಲ ಎಂದು ನನಗೆ ಗೊತ್ತಾದ ನಂತರ 2 ನೇ ಅರ್ಜಿದಾರಳ ಅಭಿರಕ್ಷೆ ಕೋರಿ ನ್ಯಾಯಾಲಯದಲ್ಲಿ ನಾನು ಯಾವುದೇ ಅರ್ಜಿಯನ್ನು ಸಲ್ಲಿಸಲು ಪ್ರಯತ್ನ ಮಾಡಿಲ್ಲ. ಮುಂದುವರೆದು ವಿಚ್ಛೇದನ ಪ್ರಕರಣದಲ್ಲಿ 2 ನೇ ಅರ್ಜಿದಾರಳ ಅಭಿರಕ್ಷೆ ಕೋರಿ ಅರ್ಜಿಯನ್ನು ಸಲ್ಲಿಸಿದ್ದೇನೆ.

**8.** ನನಗೆ ಮತ್ತು 1 ನೇ ಅರ್ಜಿದಾರಳಿಗೆ ಹೆಣ್ಣು ಮಗು ಹುಟ್ಟುವುದು ನನ್ನ ತಂದೆ ತಾಯಿಯರಿಗೆ ಇಷ್ಟವಿರಲಿಲ್ಲ ಎಂದರೆ ಸರಿಯಲ್ಲ. ಒಂದು ವೇಳೆ ಹೆಣ್ಣು ಮಗುವಿಗೆ ಜನ್ಮ ನೀಡಿದರೆ ನಿನಗೆ ಮತ್ತು ನಿನ್ನ ಗಂಡನಿಗೆ ಸಂಸಾರ ಮಾಡಲು ಬಿಡುವುದಿಲ್ಲ ಎಂದು ನನ್ನ ತಾಯಿ 1 ನೇ ಅರ್ಜಿದಾರಳಿಗೆ ಬೆದರಿಸಿದಳು ಎಂದರೆ ಸರಿಯಲ್ಲ. ನಮ್ಮ ಮನೆಯಲ್ಲಿದ್ದಾಗ 1 ನೇ ಅರ್ಜಿದಾರಳು ಅವಳ ಬಟ್ಟೆ, ಸಣ್ಣ ಪುಟ್ಟ ಆಭರಣಗಳು ಮತ್ತು ಹಣವನ್ನು ಸೂಟ್ ಕೇಸಿನಲ್ಲಿ ಹಾಕಿಡುತ್ತಿದ್ದಳು ಎಂದರೆ ನನಗೆ ಗೊತ್ತಿಲ್ಲ. ಆ ಸೂಟ್ ಕೇಸಿನ ಬೀಗ ಮುರಿದು ಅದರಲ್ಲಿದ್ದ ಆಭರಣಗಳು ಮತ್ತು ಹಣವನ್ನು ನಾವು ಅಕ್ರಮವಾಗಿ ತೆಗೆದುಕೊಂಡಿದ್ದೇವೆ ಎನ್ನುವುದು ಸರಿಯಲ್ಲ. 1 ನೇ ಅರ್ಜಿದಾರಳ ಸೂಟ್ ಕೇಸಿನಲ್ಲಿ ದೊರೆತ

ವೈದ್ಯಕೀಯ ದಾಖಲೆಗಳನ್ನು ನಿನ್ನ ವಿರುದ್ಧ ಉಪಯೋಗಿಸಬಹುದೇ ಎಂದು 1 ನೇ ಅರ್ಜಿದಾರಳನ್ನು ನಾನು ಕೇಳಿಲ್ಲ. ಸದರಿ ದಾಖಲೆಗಳ ನೈಜತೆಯ ಕುರಿತು ಶಿವಮೊಗ್ಗದ ಡಾಃ ಕೆ ಆರ್ ಶ್ರೀಧರ್ ರವರನ್ನು ಸಂಪರ್ಕಿಸಿ ನಾವು ಅಭಿಪ್ರಾಯ ಪಡೆದಿಲ್ಲ. ನನ್ನ ತಂದೆಗೆ ಹಿಸ್ಸೆ ಮೂಲಕ ಬಂದ ಆಸ್ತಿಯ ಪೈಕಿ 2 ಎಕರೆ ತೋಟವನ್ನು ನನ್ನ ತಾಯಿಯ ಹೆಸರಿಗೆ ವರ್ಗಾವಣೆ ಮಾಡಿದ್ದಾರೆ ಎಂದರೆ ಸರಿಯಲ್ಲ. ಕೃಷಿ ಮೂಲದಿಂದಲೇ ನಮ್ಮ ಕುಟುಂಬಕ್ಕೆ ವಾರ್ಷಿಕ ಸುಮಾರು 25 ಲಕ್ಷ ರೂ.ಗಳ ಆದಾಯ ಇದೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಅರ್ಜಿದಾರಳು ಗುಣಪಡಿಸಲಾಗದ ಮಾನಸಿಕ ರೋಗದಿಂದ ಬಳಲುತ್ತಿದ್ದಾಳೆ ಎಂದು ನನ್ನ ತಕರಾರಿನಲ್ಲಿ ಸುಳ್ಳು ಹೇಳಿದ್ದೇನೆ ಹಾಗೂ ಅದು ನನ್ನ ಕಲ್ಪನೆ ಎನ್ನುವುದು ಸರಿಯಲ್ಲ.

**9.** ಸಾಗರದ ಟೌನ್ ಪೋಲಿಸ್ ಠಾಣೆಯಲ್ಲಿ 1 ನೇ ಅರ್ಜಿದಾರಳು ನೀಡಿದ ದೂರಿನ ಮೇರೆಗೆ ನನ್ನ ವಿರುದ್ಧ ವರದಕ್ಷಿಣೆ ಕಿರುಕುಳದ ದೂರು ದಾಖಲಾಗಿದೆ ಎಂದರೆ ಸರಿ. ಸದರಿ ದೂರಿನ ವಿಚಾರಣೆಗೆ ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದಿಂದ ನಾನು ತಡೆಯಾಜ್ಞೆ ಪಡೆದುಕೊಂಡಿದ್ದೇನೆ ಎಂದರೆ ಸರಿ. ನಾನು ನೀಲಿ ಚಿತ್ರಗಳನ್ನು ತಯಾರಿಸಿ ಅವುಗಳನ್ನು ಮಾರಾಟ ಮಾಡುತ್ತೇನೆ ಎಂಬ ಕಾರಣಕ್ಕಾಗಿ ಪುತ್ತೂರಿನ ಪೋಲಿಸರು ದಿನಾಂಕ 26.10.2021 ರಿಂದ 28.06.2021 ರವರೆಗೆ ನನ್ನನ್ನು ಸುಮಾರು 3 ದಿನಗಳವರೆಗೆ ಬಂಧನದಲ್ಲಿರಿಸಿದ್ದರು ಎನ್ನುವುದು ಸರಿಯಲ್ಲ. ಆ ಸಂದರ್ಭದಲ್ಲಿ ಗಂಡ ಜೈಲಿನಲ್ಲಿರುವ ಹೆಂಡತಿ ಊಟ ಮಾಡಬಾರದು ಎಂದು ಮೂರು ದಿನಗಳವರೆಗೆ ನನ್ನ ತಾಯಿ 1 ನೇ ಅರ್ಜಿದಾರಳಿಗೆ ಊಟ ಕೊಟ್ಟಿಲ್ಲ ಎಂದರೆ ಸರಿಯಲ್ಲ.

**10.** 1 ನೇ ಅರ್ಜಿದಾರಳ ನಡತೆ ಸರಿ ಇಲ್ಲ ಎಂದು ನನ್ನ ತಕರಾರಿನಲ್ಲಿ ಬರೆಸಿದ್ದೇನೆ ಎಂದರೆ ಸರಿ. ಅವಳು ಏನು ಮಾಡುತ್ತಾಳೆ ಎಂದರೆ, ಕತ್ತಲಲ್ಲಿ ಎದ್ದು ಸುಮಾರು ದೂರದವರೆಗೆ ನಡೆದುಕೊಂಡು ಹೋಗುತ್ತಾಳೆ, ವಿನಃ ಕಾರಣ ಬೊಬ್ಬೆ ಹಾಕುತ್ತಾಳೆ, ತಂತಾನೆ ನಗುವುದು, ರಾತ್ರಿ ವೇಳೆ ಸುಮ್ಮನೆ ಯಾರೋ ಬೆಂಕಿ ಹಿಡಿದುಕೊಂಡು ಹೋಗುತ್ತಿದ್ದಾರೆ, ಯಾರೋ ಮಾತನಾಡುತ್ತಿದ್ದಾರೆ ಎಂದು ಹೇಳುವುದು, ಪಾತ್ರೆಗಳನ್ನು ವಿನಃ ಕಾರಣ ಬಿಸಾಡುವುದು, ಯಾವಾಗಲೂ ಮೊಬೈಲ್ ನೋಡುತ್ತಾ ಕುಳಿತಿರುವುದು, ಮಗು ಅಳುತ್ತಿದ್ದರೂ ಮೊಬೈಲ್ ನೋಡವುದು, ಬೇರೆಯವರಿಗೆ ಫೋನ್ ಮಾಡಿ ಮಗುವಿಗೆ ನನ್ನ ಅತ್ತೆ ಮಾವನ ಮೇಲೆ ಪ್ರೀತಿ ಹೆಚ್ಚಾಗುತ್ತಿದೆ ಎಂದು ಹೇಳುತ್ತಿದ್ದಳು. ಈ ಎಲ್ಲಾ ಲಕ್ಷಣಗಳನ್ನು ಮನಶಾಂತಿ ಕೇಂದ್ರಕ್ಕೆ ಹೋದಾಗ ನಾವು ಹೇಳಿದ್ದೇವೆ. ಆದರೆ ಅವರು ಬರೆದುಕೊಂಡಿದ್ದಾರೆಯೇ ಅಥವಾ ಇಲ್ಲವೇ ಎಂದು ನನಗೆ ಗೊತ್ತಿಲ್ಲ. ಆಗ ಮನಶಾಂತಿ ಕೇಂದ್ರದವರು

1 ನೇ ಅರ್ಜಿದಾರಳ ತಂದೆ ತಾಯಿಯನ್ನು ಕರೆದುಕೊಂಡು ಬಂದು ಎಂದು ತಿಳಿಸಿದರು. ಆದರೂ ಸಹ 1 ನೇ ಅರ್ಜಿದಾರಳು ಮತ್ತು ಅವಳ ತಂದೆ ತಾಯಿ ಚಿಕಿತ್ಸೆಗೆ ಸಹಕಾರ ನೀಡಿಲ್ಲ. ಮನಶಾಂತಿ ಕೇಂದ್ರದ ತಜ್ಞರಿಗೆ 1 ನೇ ಅರ್ಜಿದಾರಳನ್ನು ಮಾತ್ರ ನೋಡಿ ಅವಳಿಗೆ ಏನು ಸಮಸ್ಯೆ ಇದೆ ಎಂದು ನಿರ್ಧರಿಸಲು ಸಾಧ್ಯವಾಗಿಲ್ಲ ಎಂದರೆ, ಅವಳ ಸಂಪೂರ್ಣ ವಿವರಗಳು ಇಲ್ಲದ ಕಾರಣ ನಿರ್ಧರಿಸಲು ಸಾಧ್ಯವಾಗಿಲ್ಲ ಎನ್ನುತ್ತಾರೆ.

**11.** ಮದುವೆಗೆ ಸಾಕಷ್ಟು ಹಣ ಖರ್ಚು ಮಾಡಿದ್ದೇನೆ ಎಂದು ನನ್ನ ತಕರಾರಿನಲ್ಲಿ ಹೇಳಿದ್ದು, ಆ ಹಣವನ್ನು ನಮ್ಮ ದೊಡ್ಡಸ್ಥಿಕೆಗೆ ಮಾಡಿರುವ ವ್ಯರ್ಥ ಖರ್ಚು ಎಂದರೆ ಸರಿಯಲ್ಲ. ನಾನು ಮತ್ತು 1 ನೇ ಅರ್ಜಿದಾರಳು ಜೊತೆಯಲ್ಲಿ ಕುಳಿತು ಮಾತನಾಡುತ್ತಿದ್ದರೂ ಸಹ ನನ್ನ ತಾಯಿ ಸಹಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. 2 ನೇ ಅರ್ಜಿದಾರಳು ಹೆಣ್ಣು ಮಗು ಎನ್ನುವ ಕಾರಣಕ್ಕಾಗಿ ಒಂದು ದಿನವೂ ಸಹ 2 ನೇ ಅರ್ಜಿದಾರಳ ಯಾವುದೇ ಸೇವೆಯನ್ನು ನನ್ನ ತಾಯಿ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು 1 ನೇ ಅರ್ಜಿದಾರಳ ಖಾಸಗಿ ಜೀವನಕ್ಕೂ ಸಹ ನಾನು ನನ್ನ ತಾಯಿ ಅನುಮತಿ ಪಡೆಯಬೇಕಾಗಿತ್ತು ಎನ್ನುವುದು ಸರಿಯಲ್ಲ. ನನ್ನ ಜನನಾಂಗಕ್ಕೆ ಶಸ್ತ್ರ ಚಿಕಿತ್ಸೆ ಆಯಿತು ಎನ್ನುವ ವಿಷಯ 1 ನೇ ಅರ್ಜಿದಾರಳ ಮೂಲಕ ಇತರೆಯವರಿಗೆ ಗೊತ್ತಾಯಿತು ಎಂದು 1 ನೇ ಅರ್ಜಿದಾರಳ ಮೇಲೆ ನನ್ನ ತಾಯಿಗೆ ಅಸಮಧಾನ ಇತ್ತು ಎನ್ನುವುದು ಸರಿಯಲ್ಲ. 2 ನೇ ಅರ್ಜಿದಾರಳು ಈಗ ಏನು ಓದುತ್ತಿದ್ದಾಳೆ ಎಂದು ನಾನು ಕೇಳಿ ತಿಳಿದುಕೊಂಡಿಲ್ಲ.

**12.** ಅರ್ಜಿದಾರರು ಸಾಗರಕ್ಕೆ ಬಂದ ನಂತರ ಅವರಿಗೆ ಬಟ್ಟೆ ಹಾಗೂ ಇತರೆ ಅಗತ್ಯ ವಸ್ತುಗಳನ್ನು ಕೊರಿಯರ್ ಮೂಲಕ ಕಳುಹಿಸಿಕೊಟ್ಟಿದ್ದೇನೆ. ಈ ಬಗ್ಗೆ ನನ್ನ ಬಳಿ ರಶೀದಿಗಳು ಇವೆ. ಇವತ್ತಿನ ಪರಿಸ್ಥಿತಿಗೆ ಅನುಗುಣವಾಗಿ ಅರ್ಜಿದಾರರು ಜೀವನ ನಡೆಸಲು ಮಾಸಿಕ ಇಬ್ಬರಿಗೂ ಸೇರಿ ಸುಮಾರು 25 ಸಾವಿರ ರೂ.ಗಳ ಅಗತ್ಯವಿದೆ ಎಂದರೆ ಸರಿಯಲ್ಲ.

**13.** 1 ನೇ ಅರ್ಜಿದಾರಳ ತಂದೆಗೆ ಒಂದು ಚಿಕ್ಕ ತೋಟವಿದ್ದು, ಅವರು ದೇವಸ್ಥಾನದ ಪೂಜೆ ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಮಧ್ಯಂತರ ಆದೇಶದಂತೆ ನಾನು ಅರ್ಜಿದಾರರಿಗೆ ಜೀವನಾಂಶ ನೀಡುತ್ತಿಲ್ಲ ಎಂದರೆ ನನ್ನ ಬಳಿ ಇದ್ದಷ್ಟು ಕೊಡುತ್ತಿದ್ದೇನೆ ಎನ್ನುತ್ತಾರೆ. ದಿನಾಂಕ 16.06.2026 ಕ್ಕೆ ಇನ್ನೂ 2,43,000/- ರೂ. ಗಳ ಮಧ್ಯಂತರ ಜೀವನಾಂಶವನ್ನು ಬಾಕಿ ಉಳಿಸಿಕೊಂಡಿದ್ದೇನೆ ಎಂದರೆ, ಇರಬಹುದು. ನನಗೆ ಇರುವ ದೈಹಿಕದ ದೌರ್ಬಲ್ಯ ಮತ್ತು ನನ್ನ ಕಾನೂನು ಬಾಹೀರ ಉದ್ಯೋಗವನ್ನು

ನೋಡಿದ ಸಮಾಜದವರು ಯಾರು ಸಹ ನನಗೆ ವಿವಾಹವಾಗಲು ಹೆಣ್ಣನ್ನು ಕೊಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಆ ಕಾರಣದಿಂದ ದೂರದ ಊರಾದ ಸಾಗರಕ್ಕೆ ಬಂದು 1 ನೇ ಅರ್ಜಿದಾರಳನ್ನು ವಿವಾಹ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಕುಟುಂಬಕ್ಕೆ 3 ಎಕರೆ ತೋಟ ಮತ್ತು ಸುಮಾರು 1 ½ ಕೋಟಿ ಬೆಲೆ ಬಾಳುವ ಮನೆ ಇದ್ದರೂ ಸಹ ನಮಗೆ ಯಾವುದೇ ಆದಾಯ ಇಲ್ಲ ಎಂದು ಸುಳ್ಳು ಸಾಧನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿಯಲ್ಲಿ ಕೋರಿದಂತೆ ಅರ್ಜಿದಾರರಿಗೆ ಮಾಸಿಕ ಜೀವನಾಂಶವನ್ನು ನೀಡಿದರೂ ಸಹ ನಮ್ಮ ಕುಟುಂಬಕ್ಕೆ ಯಾವುದೇ ಕೊರತೆಯಾಗುವುದಿಲ್ಲ ಎನ್ನುವುದು ಸರಿಯಲ್ಲ. ವಿಚ್ಛೇದನ ಕೊಡುವುದಕ್ಕಾಗಿ ಇಂತಿಷ್ಟು ಹಣ ಕೊಡಬೇಕು ಎಂದು 1 ನೇ ಅರ್ಜಿದಾರಳು ಯಾವತ್ತೂ ಹಣದ ಬೇಡಿಕೆ ಇಟ್ಟಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.